ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೮ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೮ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೪ ೧೯೮೮ನೇ ಇಸವಿಯ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನಾ) (ತಿದ್ದುಪಡಿ)

ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೮ನೇ ಇಸವಿಯ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನಾ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ—೨

ಅಧ್ಯಕ್ಷರು.—ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ಹೆಸರು (ದೀರ್ಘ ಶೀರ್ಷಿಕೆ) ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಮೊದಲನೇ ಖಂಡ, ಹೆಸರು (ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಚಂದ್ರಶೇಖರ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನಾ) (ತಿದ್ದುಪಡಿ) ವಿಧೇಯಕ ೧೯೮೮ನ್ನು ಈ ಸಭೆಯಂ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''೧೯೮೦ನೇ ಇಸವಿಯ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಹಾಗೂ ನಿರ್ಮೂಲನಾ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿದಂತೆ ಅಂಗೀಕರಿಸುವುದು''

ಪ್ರಸ್ತಾವಕ್ಕೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

೫. ೧೯೮೦ನೇ ಇಸವಿಯ ಕರ್ನಾಟಕ ಜೀವನ ನಿರ್ವಹಣಾ ಭತ್ಯ ಸಂದಾಯ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ''೧೯೮೦ನೇ ಇಸವಿಯ ಕರ್ನಾಟಕ ಜೀವನ ನಿರ್ವಹಣಾ ಭತ್ಯ ಸಂದಾಯ ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೇ, ಸಣ್ಣಪುಟ್ಟ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ, ಅಂಗಡಿಗಳಲ್ಲಿ ಕೆಲಸ ಮಾಡತಕ್ಕಂಥ, ಹೋಟೆಲ್‌ಗಳಲ್ಲಿ ಕೆಲಸ ಮಾಡತಕ್ಕಂಥ ಹಾಗೂ ಇತರ ಕೆಲವುಕಡೆ ಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕವರ್ಗದವರನ್ನು ಅಮಾನತ್ತಿನಲ್ಲಿ ಇಡುತ್ತಾರೆ. ನಿಮ್ಮ ಮೇಲೆ ಕ್ರಿಮಿನಲ್ ಕೇಸ್ ಇದೆ, ಬೇರೆ ಯಾವುದೋ ಒಂದು ಕಾರಣ ಇದೆ. ಎಂದು ಮಾಲೀಕವರ್ಗದವರು ಅಥವಾ ನಿಯೋಜಕ ವರ್ಗದವರು ಬೇರೆ ಕಾರಣಗಳಿಂದ ಅವರನ್ನು ಅಮಾನತ್ತಿನಲ್ಲಿಟ್ಟರೂ ಕೂಡಾ ಅವರಿಗೆ ಯಾವುದೇ ಭತ್ಯವನ್ನು ಕೊಡುವುದಿಲ್ಲ. ಇಂತಹ ಸಂದರ್ಭದಲ್ಲಿ ಕಾರ್ಮಿಕರಿಗೆ ಸಹಾಯ ಆಗ ಬೇಕು. ಅವರಿಗೆ ಒಂದು ರೀತಿಯ ಭತ್ಯ ಸಿಗಬೇಕೆಂ ಎಂಬ ದೃಷ್ಟಿಯಿಂದ ಈ ಬಿಲ್‌ನ್ನು ಹೊಸದಾಗಿ ನಾವು ತಂದಿದ್ದೇವೆ.

ಅಧ್ಯಕ್ಷರೇ, ಇದು ನಮ್ಮ ಮಾಡೆಲ್ ಸ್ಟ್ಯಾಂಡಿಂಗ್ ಆರ್ಡರ್ ಬರುವ ಪೂರ್ವದಲ್ಲಿಯೇ ಕಾರ್ಮಿಕ ರನ್ನು ನಮ್ಮ ಸ್ಟ್ಯಾಂಡಿಂಗ್ ಆರ್ಡರ್ ಲೇಬರ್ ಕಮಿಷನರ್‌ರವರಿಂದ ಅಪ್ರೂವ್ ಆಗಿದೆ ಎಂಬ ಕಾರಣದಿಂದ ಎಷ್ಟೋ ದೊಡ್ಡ ಫ್ಯಾಕ್ಟರಿಗಳಲ್ಲಿ ಕಾರ್ಮಿಕವರ್ಗದವರಿಗೆ ಸಬ್‌ಸಿಸ್ಟೆನ್ಸ್ ಅಲೋಯೆನ್ಸ್ ಸಿಗುವುದಿಲ್ಲ. ಈ ಒಂದು ಕಾರಣದಿಂದ ರಾಜ್ಯದ ಸಣ್ಣಪುಟ್ಟ ಫ್ಯಾಕ್ಟರಿಗಳು, ಹೋಟೆಲ್‌ಗಳು, ಅಂಗಡಿಗಳಲ್ಲಿ ಕೆಲಸ ಮಾಡತಕ್ಕಂಥವರು ೫೦ಕ್ಕಿಂತ ಕಡಿಮೆ ಇದ್ದರೂ ಕೊಡಾ, ೫೦ ಕಾರ್ಮಿಕರಿರ ಬೇಕೆಂದು ಮೊದಲು ನಿಯಮವಿದ್ದರೂ ಅದನ್ನು ತೆಗೆದುಹಾಕಿ ಎಲ್ಲಾ ಕಾರ್ಮಿಕವರ್ಗದವರಿಗೂಕೂಡಾ ಯಾವುದೇ ಕಾರಣದಿಂದ ಅಮಾನತ್ತಿನಲ್ಲಿಟ್ಟಾಗ ಸಬ್‌ಸಿಸ್ಟೆನ್ಸ್ ಅಲೋಯೆನ್ಸ್ ಕೊಡಬೇಕೆಂಬ ಬಿಲ್ಲನ್ನು ಈಗ ಹೊಸದಾಗಿ ತಂದಿದ್ದೇವೆ. ಅಮಾನತ್ತು ಮಾಡಿದ ನಂತರ ಮೊದಲ ಮೂರು ತಿಂಗಳ ಅವಧಿ ಯವರೆಗೆ, ಅವರು ಪಡೆಯುತ್ತಿದ್ದ ಒಟ್ಟು ಸಂಬಳದ ೫೦ ಪರ್ಸೆಂಟ್‌ನಷ್ಟು, ಅಂದರೆ ಅವರು ಎನ್‌ಕ್ವೈರಿ ಮಾಡುವುದು ಸಾಧ್ಯತೆ ಆಗದೇ ಇದ್ದರೆ, ಅವರ ಒಟ್ಟು ಪಗಾರದ ಅರ್ಧ ಪಗಾರ, ೯೦ ದಿನಗಳ ನಂತರ ೧೮೦ ದಿನಗಳವರೆಗೆ ಅವರ ಒಟ್ಟು ಸಂಬಳದ ೭೫ ಪರ್ಸೆಂಟ್‌ನಷ್ಟು, ಅದರ ನಂತರವೂ ಅವರು ಯಾವುದೇ ಇತ್ಯರ್ಥಕ್ಕೂ ಬರದೇ ಇದ್ದರೆ ಅವರ ಸಂಬಳದ ೯೦ಪರ್ಸೆಂಟ್‌ನಷ್ಟು ಭತ್ಯ ಕೊಡಬೇಕೆಂದು ಇದರಲ್ಲಿ ಇದೆ ಅದೂ ಅಲ್ಲದೆ ಒಂದು ವೇಳೆ ಕ್ರಿಮಿನಲ್ ಕೇಸ್ ಇದೆ ಎಂದಾಗ, ಅಂತಹ ಸಂದರ್ಭದಲ್ಲಿ ಅರ್ಧ ಸಂಬಳ ಅವರಿಗೆ ಕೊಡಬೇಕೆಂಬ ಒಂದು ವಿಧೇಯಕವನ್ನು ನಾನು ಇಲ್ಲಿ ಮಂಡಿಸುತ್ತಿದ್ದೇನೆ. ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೦ನೇ ಇಸವಿಯ ಕರ್ನಾಟಕ ಜೀವನ ನಿರ್ವಹಣಾ ಭತ್ಯ ಸಂದಾಯ ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು